# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–1683/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 26/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಕೆ.ಜೆ. ಥಾಮಸ್, ಅಜೇಕಾರು, ಮರ್ಣೆ ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಕೆ.ಜೆ. ಥಾಮಸ್ ಇವರು ಈ ಸಂಸ್ಥೆಗೆ ದೂರೊಂದನ್ನು ನೀಡಿ, ಕಾರ್ಕಳ ತಾಲ್ಲೂಕಿನ ಮರ್ಣೆ ಗ್ರಾಮದ ಶ್ರೀ ಶಿವಪ್ಪ ಎನ್ನುವವರು ಜ್ಯೋತಿ ಹೈಸ್ಕೂಲ್ ಬಳಿ ದೂರುದಾರರಿಗೆ ಸೇರಿದ ಜಮೀನಿನ ಒಂದು ಅಂಶದಲ್ಲಿ (0.05 ಎಕರೆ) ದೂರುದಾರರ ಒಪ್ಪಿಗೆ ಇಲ್ಲದೇ ಅಕ್ರಮವಾಗಿ ಒಂದು ಅಂಗಡಿಯನ್ನು ಕಟ್ಟಿರುತ್ತಾರೆಂದು, ಸದರಿ ತನ್ನ ಜಮೀನು ಕಾರ್ಕಳ–ಅಂಡಾರು ಮುಖ್ಯ ರಸ್ತೆಯ ಬದಿಯಲ್ಲಿದ್ದು ಬಹಳ ಮೌಲ್ಯಯುತವಾಗಿರುತ್ತದೆ ಎಂದು ತನ್ನ ಜಮೀನಿನ ಎದುರು ಭಾಗದಲ್ಲಿಯೇ ಸದರಿ ಶ್ರೀ ಶಿವಪ್ಪ ಎನ್ನುವವರು ಅಂಗಡಿಯನ್ನು ಕಟ್ಟಿರುವುದರಿಂದ, ತನ್ನ ಜಮೀನಿನ ಮೌಲ್ಯವು ಕಡಿಮೆ ಆಗಿರುತ್ತದೆ ಹಾಗೂ ಸದರಿ ಶಿವಪ್ಪ ರವರು ರಸ್ತೆಯ ಮಾರ್ಜಿನ್‌ನಲ್ಲಿ ಅಂಗಡಿ ಕಟ್ಟಲು ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಥವಾ ಪಂಚಾಯತಿಯ ಅನುಮತಿಯನ್ನು ಪಡೆದಿರುವುದಿಲ್ಲ, ಇದಲ್ಲದೇ, ಈ ಬಗ್ಗೆ ದೂರುದಾರರು ಅಕ್ರಮವಾಗಿ ಕಟ್ಟಿರುವ ಸದರಿ ಅಂಗಡಿಯನ್ನು ತೆರವುಗೊಳಿಸುವಂತೆ ಕೋರಿ ಎದುರುದಾರರಾದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರನ್ನು ಕೋರಿದ್ದರೂ, ಸದರಿಯವರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಅವರು ಸದರಿ ಶ್ರೀ ಶಿವಪ್ಪನವರೊಡನೆ ಸೇರಿಕೊಂಡು ತಮಗೆ ವಂಚಿಸಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ

ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅದರಲ್ಲಿ ದಿ:30/06/2014 ರಂದು ಲೋಕೋಪಯೋಗಿ ಇಲಾಖೆ ಉಪವಿಭಾಗ, ಕಾರ್ಕಳ ಇಲ್ಲಿ ತಾನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತೇನೆಂದು ನಂತರ ದಿ:13/07/2016 ರಂದು ತನಗೆ ಸದರಿ ಹುದ್ದೆಯಿಂದ ವರ್ಗಾವಣೆಯಾಗಿರುತ್ತದೆ ಎಂದು ದೂರುದಾರರ ದೂರಿನ ಬಗೆಗಿನ ಕಡತವನ್ನು ಪರಿಶೀಲಿಸಲಾಗಿ, ದಿ:26/10/2009 ರಲ್ಲಿ ಮರ್ಣೆ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯವರು ಶ್ರೀ ಶಿವಪ್ಪ ಪೂಜಾರಿ ಇವರಿಗೆ ಪತ್ರ ಬರೆದು, ಅವರು ತಗಡು ಶೀಟ್ ಹಾಕಿ ನಿರ್ಮಿಸಿದ ಕಟ್ಟಡವನ್ನು ತೆರವುಗೊಳಿಸಬೇಕೆಂದು ತಿಳಿಸಿರುತ್ತಾರೆ. ಆನಂತರ 2014ರ ಸೆಪ್ಟೆಂಬರ್ ತಿಂಗಳಿನಲ್ಲಿ ಕಾರ್ಕಳ ಉಪವಿಭಾಗ ವ್ಯಾಪ್ತಿಯ ರಸ್ತೆಯ ಮಾರ್ಜಿನ್‌ನಲ್ಲಿ ಅಂಗಡಿ ಕಟ್ಟಡ ನಿರ್ಮಿಸಿದ ಬಗ್ಗೆ ದೂರು ನೀಡಿದ್ದರಿಂದ, ದಿ:26/09/2014 ರಂದು ಸ್ಥಳ ಪರೀಕ್ಷೆ ಮಾಡಲಾಗಿರುತ್ತದೆ ಎಂದು ಹಾಗೂ ರಸ್ತೆ ಮಧ್ಯದಿಂದ 15.50 ಮೀ., ಅಂತರದಲ್ಲಿ ಅಂಗಡಿ ಕಟ್ಟಡ ನಿರ್ಮಿಸಿರುವುದು ಕಂಡು ಬಂದಿದ್ದು, ಇದು ನಿಯಮ ಉಲ್ಲಂಘನೆಯಾಗುತ್ತಿದ್ದ ಕಾರಣ, ಸದರಿ ಶ್ರೀ ಶಿವಪ್ಪರವರಿಗೆ ಕಟ್ಟಡವನ್ನು ತೆರವುಗೊಳಿಸಲು ಮೌಖಿಕವಾಗಿ ತಿಳಿಸಲಾಗಿತ್ತು. ಆದರೂ ಕೂಡ ಕಟ್ಟಡವನ್ನು ತೆರವುಗೊಳಿಸದೇ ಇದ್ದ ಕಾರಣ, ದಿ:07/10/2014 ರಂದು ಸದರಿ ಶ್ರೀ ಶಿವಪ್ಪರವರಿಗೆ ಕಟ್ಟಡ ತೆರವುಗೊಳಿಸುವ ಬಗ್ಗೆ ಪತ್ರವನ್ನು ರವಾನಿಸಲಾಗಿತ್ತು. ದಿ:11/07/2015 ರಂದು ದೂರುದಾರರು ತಮ್ಮ ಕಛೇರಿಗೆ ಬಂದು ಸದರಿ ಶ್ರೀ ಶಿವಪ್ಪರವರು ತಮ್ಮ ಅಂಗಡಿಯನ್ನು ಇನ್ನು ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿ ಪತ್ರ ಬರೆದಿದ್ದು, ದಿ:20/07/2015 ರಂದು ಪುನ: ಶ್ರೀ ಶಿವಪ್ಪರವರಿಗೆ ತಮ್ಮ ಕಛೇರಿಯಿಂದ ಪತ್ರ ಬರೆಯಲಾಯಿತ್ತೆಂದು ಹಾಗೆಯೇ ದಿ:26/11/2015 ರಂದು ಸಹ ಕಟ್ಟಡ ತೆರವುಗೊಳಿಸುವ ಬಗ್ಗೆ ತಿಳಿಸಿ ಪತ್ರವನ್ನು ಸದರಿ ಶ್ರೀ ಶಿವಪ್ಪ ರವರಿಗೆ ರವಾನಿಸಲಾಗಿರುತ್ತದೆ. ದಿ:04/04/2016 ರಂದು ಶ್ರೀ ಶಿವಪ್ಪರವರು ಎದುರುದಾರರ ಕಛೇರಿಗೆ ಸುಮಾರು 29 ಜನಗಳ ಸಹಿಯೊಂದಿಗೆ ಬರೆದಿದ್ದ ಪತ್ರವನ್ನು ತಂದು ಕೊಟ್ಟಿದ್ದು, ಅದರಲ್ಲಿ ಗೂಡಂಗಡಿಯನ್ನು ಸುಮಾರು 20 ವರ್ಷಗಳ ಹಿಂದೆ ಕಟ್ಟಿಕೊಂಡಿದ್ದು, ರಸ್ತೆ ಅಗಲೀಕರಣ ಸಮಯದಲ್ಲಿ ಯಾವುದೇ ತಕರಾರು ಇಲ್ಲದೇ ಕಟ್ಟಡವನ್ನು ತೆರವುಗೊಳಿಸುತ್ತೇನೆಂದು ತಿಳಿಸಿರುತ್ತಾರೆ. ದಿ:27/04/2016 ರಂದು ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಶ್ರೀ ಶಿವಪ್ಪ ಇವರ ಪತ್ರದ ಪ್ರತಿಯನ್ನು ಲಗತ್ತಿಸಿ ವಸ್ತುಸ್ಥಿತಿಯನ್ನು ತಿಳಿಸಿರುತ್ತೇನೆ. ನಂತರ ತಾನು ದಿ:13/07/2016 ರಂದು ತನಗೆ ವರ್ಗವಾದ ಪ್ರಯುಕ್ತ

ಲೋಕೋಪಯೋಗಿ ಇಲಾಖೆ ಉಪವಿಭಾಗ, ಕಾರ್ಕಳ ಇಲ್ಲಿಂದ ಪದಮುಕ್ತಗೊಂಡಿರುತ್ತೇನೆಂದು ತಿಳಿಸಿರುತ್ತಾರೆ. ಹಾಗೂ ದೂರುದಾರರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವೆಂದು ತಿಳಿಸಿರುತ್ತಾರೆ.

3. ದೂರಿನಂಶಗಳನ್ನು ಎದುರುದಾರರ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಶ್ರೀ ಶಿವಪ್ಪ ಪೂಜಾರಿ ಇವರು ಅಕ್ರಮವಾಗಿ ರಸ್ತೆ ಮಾರ್ಜಿನ್ ಅನ್ನು ಬಿಡದೇ ಕಟ್ಟಡ ಕಟ್ಟಿರುವ ಬಗ್ಗೆ ದಾಖಲೆಗಳಿಂದ ಕಂಡು ಬರುತ್ತದೆ. ಶ್ರೀ ಶಿವಪ್ಪರವರಿಗೆ ಅಂಗಡಿಯನ್ನು ಇಡಲು ಹಾಗೂ ವ್ಯಾಪಾರ ಮಾಡಲು ಗ್ರಾಮ ಪಂಚಾಯತಿಯವರು ಯಾವುದೇ ರೀತಿಯ ಪರವಾನಗೆ ನೀಡಿಲ್ಲವೆಂದು, ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರು ತಮ್ಮ ಪತ್ರ ದಿ:28/10/2011ರ ಮುಖೇನ ದೂರುದಾರರಿಗೆ ತಿಳಿಸಿರುವುದು ಕಂಡು ಬರುತ್ತದೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಸದರಿ ಶ್ರೀ ಶಿವಪ್ಪ ಪೂಜಾರಿ ಇವರಿಗೆ ಪತ್ರ ಬರೆದು ಕಾರ್ಕಳ ತಾಲ್ಲೂಕು ಅಜೆಕಾರು-ಮಿಯಾರು ರಸ್ತೆಯಲ್ಲಿ ಶ್ರೀ ವಿಷ್ಣು ಮೂರ್ತಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ದ್ವಾರದ ಬಳಿ ರಸ್ತೆಯ ಮಧ್ಯದಿಂದ 15.50 ಮೀ., ಅಂತರದಲ್ಲಿ ಅನಧೀಕೃತವಾಗಿ ರಸ್ತೆ ಮಧ್ಯದಿಂದ 25.00 ಮೀ., ಅಂತರದಲ್ಲಿ ಜಿಲ್ಲಾ ಮುಖ್ಯ ರಸ್ತೆ ಮಧ್ಯದಿಂದ ಯಾವುದೇ ಕಟ್ಟಡ ನಿರ್ಮಿಸುವಂತಿಲ್ಲವೆಂದು ನಿಯಮವಿದ್ದು, ಶ್ರೀ ಶಿವಪ್ಪ ಪೂಜಾರಿ ಇವರು ಕಟ್ಟಿರುವ ಕಟ್ಟಡವು ರಸ್ತೆ ಮಧ್ಯದ ಮಾರ್ಜಿನ್‌ನಿಂದ 25.00 ಮೀ., ಗೂ ಕಮ್ಮಿ ಅಂತರದಲ್ಲಿ ಇರುವುದರಿಂದ, ಅವರಿಗೆ ನೋಟೀಸ್ ನೀಡಿ ಪತ್ರ ತಲುಪಿದ 7 ದಿನಗಳ ಒಳಗೆ ಸದರಿ ಕಟ್ಟಡವನ್ನು ತೆರವುಗೊಳಿಸತಕ್ಕದ್ದು ಎಂದು ಹಾಗೂ ರಸ್ತೆ ಮಾರ್ಜಿನ್ ಬಿಟ್ಟು ಕಟ್ಟಡವನ್ನು ಹಿಂದೆ ಇರುವ ನಿಮ್ಮ ಸ್ವಂತ ಖಾಲಿ ಜಾಗಕ್ಕೆ ವರ್ಗಾಯಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ತಾವೇ ಜವಾಬ್ದಾರರಾಗಿರುತ್ತಾರೆಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ತಮ್ಮ ದಿ:07/10/2014ರ ಪತ್ರದ ಮುಖೇನ ತಿಳಿಸಿರುವುದು ಕಂಡು ಬರುತ್ತದೆ. ಹಾಗೆ ದಿ:20/07/2015 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಶ್ರೀ ಶಿವಪ್ಪ ಪೂಜಾರಿ ಇವರಿಗೆ ಪತ್ರ ಬರೆದು ಅನಧೀಕೃತ ಕಟ್ಟಡವನ್ನು ತೆರವುಗೊಳಿಸುವಂತೆ ಸೂಚಿಸಿರುವುದು ಕಂಡು ಬರುತ್ತದೆ. ಹಾಗೆ ದಿ:26/11/2015 ರಂದು ಮತ್ತೊಂದು ನೋಟೀಸ್ ನೀಡಿ ಅನಧೀಕೃತ ಕಟ್ಟಡವನ್ನು ತೆರವುಗೊಳಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಶ್ರೀ ಶಿವಪ್ಪ ಪೂಜಾರಿ ಇವರಿಗೆ ಸೂಚಿಸಿರುತ್ತಾರೆ. ದಿ:04/03/2016 ರಂದು ಉಡುಪಿಯ ಅಪರ ಜಿಲ್ಲಾಧಿಕಾರಿಗಳು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಡುಪಿ ಇವರಿಗೆ ಪತ್ರ ಬರೆದು, ಶ್ರೀ ಶಿವಪ್ಪ ರವರ ಅನಧೀಕೃತ

ಕಟ್ಟಡವನ್ನು ಪರಿಶೀಲಿಸಿ ತೆರವುಗೊಳಿಸಲು ನಿಯಮಾನುಸಾರ ಕ್ರಮ ಜರುಗಿಸಲು ತಿಳಿಸಿರುವುದು ಕಂಡು ಬರುತ್ತದೆ. ದಿ:02/04/2016 ರಂದು ಜಿಲ್ಲಾಧಿಕಾರಿಗಳು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಡುಪಿ ಉಪವಿಭಾಗ ಇವರಿಗೆ ಪತ್ರ ಬರೆದು ಶ್ರೀ ಶಿವಪ್ಪ ಇವರ ಅನಧೀಕೃತ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಕೂಡಲೇ ಸೂಕ್ತ ಕ್ರಮ ಜರುಗಿಸಿ ದೂರುದಾರರಿಗೆ ಮಾಹಿತಿ ನೀಡುವಂತೆ ಸೂಚಿಸಿರುತ್ತಾರೆ.

4. ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ, ಶ್ರೀ ಶಿವಪ್ಪ ಪೂಜಾರಿ ಇವರು ಮರ್ಣೆಗ್ರಾಮದ ಜ್ಯೋತಿ ಹೈಸ್ಕೂಲ್ ಬಳಿ ರಸ್ತೆಯ ಬದಿಯಲ್ಲಿ ರಸ್ತೆ ಮಾರ್ಜಿನ್ ಅನ್ನು ಬಿಡದೇ ಅಕ್ರಮವಾಗಿ ಕಟ್ಟಡವನ್ನು ಕಟ್ಟಿದ್ದು, ಸದರಿ ಕಟ್ಟಡವನ್ನು ತೆರವುಗೊಳಿಸಲು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಿಂದ ಹಲವಾರು ನೋಟಿಸ್ ನೀಡಿದ್ದಾಗ್ಯೂ ಕಟ್ಟಡವನ್ನು ತೆರವುಗೊಳಿಸಲು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಎದುರುದಾರರು ದಿ:13/07/2016 ರಂದು ನೀರಾವರಿ ಇಲಾಖೆಗೆ ವರ್ಗಾವಣೆಯಾಗಿರುತ್ತಾರೆ. ಆನಂತರ ಕಟ್ಟಡ ತೆರವುಗೊಳಿಸುವ ಬಗ್ಗೆ ಇಲಾಖಾ ವತಿಯಿಂದ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಕಂಡು ಬಂದಿರುತ್ತದೆ. ಸದರಿ ಶ್ರೀ ಶಿವಪ್ಪ ಪೂಜಾರಿ ಇವರ ಕಟ್ಟಡವು ವಿಷ್ಣುಮೂರ್ತಿ ದೇವಸ್ಥಾವನಕ್ಕೆ ಹೋಗುವ ರಸ್ತೆಯ ಮಧ್ಯ ಬಿಂದುವಿನಿಂದ 15.50 ಮೀ., ಅಂತರದಲ್ಲಿ ರಸ್ತೆ ಮಾರ್ಜಿನ್‌ನಲ್ಲಿ ಕಟ್ಟಡ ಇರುವುದು ಸ್ಪಷ್ಟಪಟ್ಟಿರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಶ್ರೀ ಶಿವಪ್ಪ ಪೂಜಾರಿ ಇವರು ಕಟ್ಟಿರುವ ಮೇಲೆ ಹೇಳಿದ ಅನಧೀಕೃತ ಕಟ್ಟಡವನ್ನು ತೆರವುಗೊಳಿಸಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 26/4/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**